## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 267**
**ಸದಸ್ಯರ ಹೆಸರು : ಶ್ರೀಮತಿ ಹೇಮಲತ ನಾಯಕ್ (ವಿಧಾನಸಭಾ ಕ್ಷೇತ್ರ )**
**ಉತ್ತರಿಸುವ ದಿನಾಂಕ : 29.01.2026**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಪ್ಪಳ ಜಿಲ್ಲೆಯ ಅಳವಂಡಿ ಬೆಟಗೇರಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾದ ಅನುದಾನ ಎಷ್ಟು; ಈ ಯೋಜನೆಯಿಂದ ಲಾಭ ಪಡೆಯುವ ಗ್ರಾಮಗಳು ಯಾವುವು;</td><td>ಅಳವಂಡಿ ಬೆಟಗೇರಿ ಏತ ನೀರಾವರಿ ಯೋಜನೆಯ ರೂ.87.10 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ದಿನಾಂಕ:30.12.2014ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಿಂದ ಕೊಪ್ಪಳ ತಾಲ್ಲೂಕಿನ ಕವಲೂರು, ಅಳವಂಡಿ, ಮೈನಳ್ಳಿ, ಬಿಕ್ಕನಹಳ್ಳಿ, ಹಿರೇಸಿಂಧೋಗಿ, ಹಂದ್ರಾಳ, ಬೆಟಗೇರಿ ಗ್ರಾಮಗಳಿಗೆ ನೀರಾವರಿ ಒದಗಿಸಲು ಉದ್ದೇಶಿಲಾಗಿರುತ್ತದೆ.</td></tr>
<tr><td>ಆ)</td><td>ಈ ಯೋಜನೆ ಸಲುವಾಗಿ ಯಾವ ಯಾವ ಗ್ರಾಮದ ಎಷ್ಟು ಎಕರೆ ಜಮೀನುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ; (ವಿವರ ಒದಗಿಸುವುದು)</td><td>ಅಳವಂಡಿ ಬೆಟಗೇರಿ ಏತ ನೀರಾವರಿ ಯೋಜನೆಯಡಿ ಇದೂವರೆಗೆ Headworks, rising main & jackwell ನಿರ್ಮಾಣ ಕಾಮಗಾರಿಗೆ 36 ಎಕರೆ 23 ಗುಂಟೆ ಜಮೀನು ಮತ್ತು ಕಾಲುವೆ, ಉಪ ಕಾಲುವೆ, minorಗಳ ನಿರ್ಮಾಣಕ್ಕಾಗಿ 110 ಎಕರೆ 20 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಗ್ರಾಮವಾರು ವಿವರಗಳು ಈ ಕೆಳಗಿನಂತಿದೆ.
<table>
<tr><th>ಗ್ರಾಮ</th><th>ಭೂಸ್ವಾಧೀನ (ಎ-ಗುಂ)</th><th>ಗ್ರಾಮ</th><th>ಭೂಸ್ವಾಧೀನ (ಎ-ಗುಂ)</th></tr>
<tr><td>ಕವಲೂರು</td><td>48 - 23</td><td>ಹಂದ್ರಾಳ</td><td>05 - 22</td></tr>
<tr><td>ಅಳವಂಡಿ</td><td>30 - 07</td><td>ಬಿಕನಳ್ಳಿ</td><td>00 - 11</td></tr>
<tr><td>ಬೆಟಗೇರಿ</td><td>13 - 25</td><td>ಮೈನಳ್ಳಿ</td><td>11 - 00</td></tr>
<tr><td>ಮೋರನಹಳ್ಳಿ</td><td>00 - 09</td><td>ಹಿರೇಸಿಂಧೋಗಿ</td><td>19 - 02</td></tr>
<tr><td>ಹನಕುಂಟಿ</td><td>04 - 36</td><td>ಕೊಮಲಾಪುರ</td><td>06 - 30</td></tr>
<tr><td>ನರಸಿಪುರ</td><td>01 - 02</td><td>ತಳಕಲ್ಲು</td><td>06 - 02</td></tr>
</table></td></tr>
<tr><td>ಇ)</td><td>ಜಮೀನು ಕಳೆದುಕೊಂಡ ಎಷ್ಟು ಜನ ರೈತರಿಗೆ ಪರಿಹಾರ ಧನ ಪಾವತಿಸಲಾಗಿದೆ; ಪರಿಹಾರ ಧನ ಪಾವತಿಸಲು ಬಾಕಿ ಇರುವ ಪ್ರಕರಣಗಳು ಎಷ್ಟು; (ವಿವರ ಒದಗಿಸುವುದು)</td><td rowspan="2">ಅಳವಂಡಿ ಬೆಟಗೇರಿ ಯೋಜನೆಯಡಿ ಇದೂವರೆಗೆ ಸ್ವಾಧೀನಪಡಿಸಿಕೊಂಡ ಜಮೀನುಗಳ ಪೈಕಿ ಇದೂವರೆಗೆ ಒಟ್ಟು 229 ಫಲಾನುಭವಿಗಳಿಗೆ ಪರಿಹಾರ ಧನ ಪಾವತಿಸಲಾಗಿದ್ದು, 50 ಫಲಾನುಭವಿಗಳಿಗೆ ಪರಿಹಾರಧನ ಪಾವತಿಸಲು ಬಾಕಿ ಇರುತ್ತದೆ.<br><br>ಸಿವಿಲ್ ನ್ಯಾಯಾಲಯದಲ್ಲಿ ಕುಟುಂಬ ವ್ಯಾಜ್ಯವಿರುವುದರಿಂದ ಬಾಕಿ ಇರುವ ಫಲಾನುಭವಿಗಳು ಪರಿಹಾರಧನ ಪಡೆದುಕೊಂಡಿರುವುದಿಲ್ಲ.</td></tr>
<tr><td>ಈ)</td><td>ಬಾಕಿ ಉಳಿದ ಭೂ ಮಾಲೀಕರಿಗೆ ಪರಿಹಾರ ಧನ ಪಾವತಿಸಲು ಇರುವ ಅಡಚಣೆಗಳು ಏನು; ಪರಿಹಾರ ಧನ ಪಾವತಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು; (ವಿವರ ನೀಡುವುದು)</td></tr>
<tr><td>ಉ)</td><td>ಈ ಯೋಜನೆಯಡಿ ಮಂಜೂರಾದ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ; ಬಾಕಿ ಇರುವ ಕಾಮಗಾರಿಗಳು ಎಷ್ಟು; ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)</td><td>ಸದರಿ ಯೋಜನೆಯ ಪ್ರಸ್ತುತ ಹಂತದ ವಿವರ ಈ ಕೆಳಕಂಡಂತಿವೆ:<br><br>1) ಕೊಪ್ಪಳ ತಾಲ್ಲೂಕಿನ ಕವಲೂರು, ಅಳವಂಡಿ, ಮೈನಹಳ್ಳಿ, ಬಿಕ್ಕನಹಳ್ಳಿ, ಹಿರೆಸಿಂದೋಗಿ, ಹಂದರಹಳ್ಳಿ ಗ್ರಾಮಗಳ ಸುಮಾರು 6000 ಎಕರೆಗೆ ನೀರೊದಗಿಸುವ ಕಾಲುವೆ ಮತ್ತು ಉಪ-ಕಾಲುವೆಯ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದ್ದು, ಜಾಕ್‌ವೆಲ್, ರೈಸಿಂಗ್ ಮೇನ್, ಡೆಲಿವರಿ ಚೇಂಬರ್‌ಗೆ ಸಂಬಂಧಿಸಿದ ಎಲ್ಲಾ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಸಿಇಐಜಿ ಇನ್ಸ್‌ಪೆಕ್ಷನ್ ಆದ ನಂತರ ಲೈನ್ ಚಾರ್ಜ್ ಮಾಡಿ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಜೂನ್-2026 ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.<br><br>2) ಬೆಟಗೇರಿ ಗ್ರಾಮದ ಹೆಚ್ಚುವರಿ 3000 ಎಕರೆಗೆ ನೀರೊದಗಿಸುವ ಸಂಬಂಧ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿಯಲ್ಲಿ ರೈಸಿಂಗ್ ಮೇನ್, ಡೆಲಿವರಿ ಚೇಂಬರ್ ಕಾಮಗಾರಿ ಪ್ರಗತಿಯಲ್ಲಿದ್ದು, ಪಂಪ್‌ಗಳನ್ನು ಅಳವಡಿಸುವ ಕಾಮಗಾರಿ ಬಾಕಿ ಇರುತ್ತದೆ. ಸೆಪ್ಟೆಂಬರ್-2026ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.</td></tr>
</table>

**ಜಸಂಇ 19 ಎಂಎಲ್ಎ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**